# ಪ್ರೇಕ್ಷಕರ ಪ್ರೀತಿಯೇ ಬಂಧುತ್ವದ ಪ್ರತೀಕ



ರಕ್ಷಿತಾ ಪಿ. ಝೀ ಕನ್ನಡದ 'ಆದಿಲಕ್ಷ್ಮೀ ಪುರಾಣ'ದಲ್ಲಿ ಅಮೃತಾ

■ ರಾಘವೇಂದ್ರ ಕೆ.

◆ ಅಭಿನಯದ ನಂಟು ಬೆಳೆದದ್ದು ಹೇಗೆ?

ಪ್ರಾಥಮಿಕ ಶಾಲೆಯ ಹಂತದಲ್ಲೇ ಅಭಿನಯ ಶುರುವಾಯಿತು. 'ಪಂಚರಂಗಿ ಪೋಂ ಪೋಂ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಸೀರಿಯಲ್ ಮತ್ತು ಸಿನಿಮಾದಲ್ಲಿ ಮಾಡಬೇಕು ಎನ್ನುವ ಹುಚ್ಚು ಆಗಲೇ ಬಂದಿತ್ತು. ಅದಕ್ಕೆ ಪ್ರೇರಣೆ ನೀಡಿದ್ದು ಭರತನಾಟ್ಯ ಅಭ್ಯಾಸ. ಮೂರು ವರ್ಷದವಳಿದ್ದಾಗಲೇ ಡಾನ್ಸ್ ಕಲಿಕೆ ಆರಂಭವಾಗಿತ್ತು. ಎಲ್‌ಕೆಜಿ ಇದ್ದಾಗಲೇ ಡಿಡಿ ಚಂದನದ 'ಚಿಣ್ಣರ ಲೋಕ' ಮಕ್ಕಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಪಿಯು ಹೊತ್ತಿಗೆ ಅವಕಾಶ ಹುಡುಕಿ ಆಡಿಷನ್ ಕೊಡಲು ಶುರುಮಾಡಿದೆ. 'ದೇವಯಾನಿ'ಯಲ್ಲಿ ಒಂದು ಪಾತ್ರ ಸಿಕ್ಕಿತು. ಸಸ್ಪೆನ್ಸ್ ಕಥಾ ಹಂದರದ ಅದರಲ್ಲಿ ಎರಡನೇ ಲೀಡ್ ಮಾಡಿದೆ. ಓದನ್ನು ಮುಂದುವರಿಸುತ್ತಲೇ ಅಭಿನಯವನ್ನು ಮಾಡಿದೆ. ನಂತರ ಕೆಲವು ದಿನ ಬಿಡುವು ತೆಗೆದುಕೊಂಡೆ. ಅಷ್ಟರಲ್ಲಿ ಎಂಜಿನಿಯರಿಂಗ್ ಮುಗಿಯಿತು. 'ಮದುಮಗಳು' ಧಾರಾವಾಹಿಯಲ್ಲಿ ನಾಯಕಿಯಾದೆ. ಅದು ತುಂಬ ಚೆನ್ನಾಗಿ ಬಂತು. ಒಳ್ಳೆಯ ಹೆಸರು ತಂದುಕೊಟ್ಟಿತು. ಸಂಬಂಧಿಗಳು ಓದಿನ ಬಗ್ಗೆ ಹೀಯಾಳಿಸಿದರು. ಮತ್ತೆ ನಟನೆಯನ್ನು ಬಿಟ್ಟು 2.5 ವರ್ಷ ಕೆಲಸ ಮಾಡಿದೆ. ಅಂದುಕೊಂಡ ಕೆಲಸ ಇದಲ್ಲ. ನಾನು ಬಣ್ಣದ ಲೋಕದಲ್ಲಿ ಇರಬೇಕು ಅನ್ನುವ ವೇದನೆ ಕಾಡಲು ಶುರುವಾಯಿತು. ಜನ ನನ್ನನ್ನು ಗುರುತಿಸುವಂತೆ ಬೆಳೆಯಬೇಕು ಎಂದೆನಿಸಿತು. ಕೆಲಸವನ್ನು ಬಿಟ್ಟು ಮತ್ತೆ ಕಿರುತೆರೆಗೆ ಬಂದ ನನಗೆ 'ಆದಿಲಕ್ಷ್ಮೀ ಪುರಾಣ'ದ ಅವಕಾಶ ತುಂಬ ಖುಷಿ ಕೊಟ್ಟಿದೆ.

◆ ಆಡಿಷನ್ ಕೊಡುತ್ತಿದ್ದ ದಿನಗಳಲ್ಲಿ ಎದುರಾದ ಸವಾಲುಗಳೇನು?

ನಮ್ಮೂರು ತುಮಕೂರು. ಚಿಕ್ಕ ಕುಟುಂಬ. ಅಪ್ಪ–ಅಮ್ಮ ನಾನು ಮೂವರೇ ಮನೆಯಲ್ಲಿರುವುದು. ಅಮ್ಮ ಪೋಲಿಯೊ (ಅಂಗವೈಕಲ್ಯ) ಓಡಾಡುವುದು ಕಷ್ಟ. ತಂದೆ ಉದ್ಯಮಿ. ತೆರೆಯಲ್ಲಿ ತನ್ನ ಮಗಳು ಕಾಣಿಸಿಕೊಳ್ಳಬೇಕು ಎನ್ನುವುದು ಅಮ್ಮನ ಆಸೆ ಕೂಡ. ಅವರೇ ಆಡಿಷನ್‌ಗೆ ಬಸ್ಸಿನಲ್ಲಿ ಕರೆದುಕೊಂಡು ಬರುತ್ತಿದ್ದರು. ಬೆಂಗಳೂರಿನಲ್ಲಿ ಟ್ಯಾಕ್ಸಿ ಮಾಡಿಕೊಂಡು ನಿಗದಿತ ಸ್ಥಳಕ್ಕೆ ಹೋಗುವುದು ಮಾಮೂಲಿಯಾಗಿತ್ತು. ಬೆಳಿಗ್ಗೆ ಮೂರು ಗಂಟೆಗೆ ಎದ್ದು ರೆಡಿಯಾಗಬೇಕಿತ್ತು. ಅವಕಾಶ ಸಿಕ್ಕಾಗ ಆರಂಭದಲ್ಲಿ ಚಿತ್ರೀಕರಣಕ್ಕೂ ಅಮ್ಮ ನನ್ನ ಜೊತೆ ಇರುತ್ತಿದ್ದರು. ತುಮಕೂರಿನಿಂದಲೇ ಓಡಾಡಿದೆ. ಅಮ್ಮನಿಗೆ ಆಗದಿದ್ದರೆ ಅಪ್ಪ ಬರುತ್ತಿದ್ದರು. ಪೋಷಕರ ಪ್ರೋತ್ಸಾಹ ತುಂಬ ಇದೆ.

◆ 'ಆದಿಲಕ್ಷ್ಮೀ...' ಧಾರಾವಾಹಿಯಲ್ಲಿ ನಿಮ್ಮ ಪಾತ್ರ ಹೇಗಿದೆ?

ನನ್ನ ಅಭಿನಯದ ಮೇಲೆ ನಂಬಿಕೆ ಇರುವುದರಿಂದ ಸುಲಭ ಅನ್ನಿಸುತ್ತದೆ. ನನ್ನಂತೆಯೇ ಪಾತ್ರವೂ ಇದೆ. ಅಮೃತಾ ಒಳ್ಳೆಯ ಹುಡುಗಿ. ಅವಳಿಗೆ ಓದು ಬಿಟ್ಟು ಮತ್ತೊಂದು ಕೆಲಸ ಗೊತ್ತಿಲ್ಲ. ಅವಳನ್ನು ಹಳ್ಳಿ ಹುಡುಗನಿಗೆ ಮದುವೆ ಮಾಡಿಕೊಡುತ್ತಾರೆ. ಅಲ್ಲಿ ಹೇಗೆ ಜೀವನ ಮಾಡಲು ಸಾಧ್ಯ? ಎಂತಹ ಕಷ್ಟವನ್ನು ಎದುರಿಸಬೇಕಾಗುತ್ತದೆ ಎನ್ನುವುದು ಇಲ್ಲಿನ ಪ್ರಧಾನ ಸಮಸ್ಯೆ. ಅವಳಿಗೆ ಲಂಡನ್‌ನಲ್ಲಿ ಪಿಎಚ್‌ಡಿ ಮಾಡಬೇಕು ಎನ್ನುವ ಕನಸಿದೆ. ಎಲ್ಲದಕ್ಕಿಂತ ತನ್ನ ಕುಟುಂಬದ ಮೇಲೆ ಗೌರವವಿದೆ. ಎಂದೂ ಗಟ್ಟಿದನಿಯಲ್ಲಿ ಮಾತನಾಡಿದವಳಲ್ಲ. ಅವಳು ಎಲ್ಲೇ ಧ್ವನಿ ಎತ್ತಿದರೂ ಅದಕ್ಕೊಂದು ತೂಕ ಇರುತ್ತದೆ. ಅವಳಿಗೆ ತಾತ ಮದುವೆ ಮಾಡಬೇಕು ಎನ್ನುತ್ತಾರೆ. ಅವರ ಮಾತನ್ನು ಗೌರವಿಸಿ ಮದುವೆ ಆಗುತ್ತಾಳೆ. ನಗರದಲ್ಲಿ ಬೆಳೆದ ಹುಡುಗಿ ಹಳ್ಳಿಯ ಬದುಕನ್ನು ಕಲಿಯುತ್ತಿದ್ದಾಳೆ. ಅವಳನ್ನು ನೋಡಿ ಅನೇಕರು ಅಯ್ಯೋ ಪಾಪ ಎಂದು ಮರುಗುತ್ತಾರೆ. ವೀಕ್ಷಕರಿಗೆ ಎಲ್ಲೋ ತಲುಪಿದೆ.

◆ ಪಾತ್ರದ ಆಯ್ಕೆಗೆ ನಿಮ್ಮದೇ ಆದ ಮಾನದಂಡಗಳು ಏನು?

ಕಥೆ ಚೆನ್ನಾಗಿರಬೇಕು. ಸಿನಿಮಾ ಅಥವಾ ಧಾರಾವಾಹಿ ಯಾವುದೇ ಇದ್ದರೂ ಅದು ಕಥೆಯ ಮೇಲೆ ನಿಂತಿರುತ್ತದೆ. ಅದರ ನಂತರ ನಿರ್ಮಾಣ ಸಂಸ್ಥೆ ಮತ್ತು ಅಲ್ಲಿನ ವಾತಾವರಣದ ಬಗ್ಗೆ ಯೋಚಿಸುತ್ತೇನೆ. ಅದೂ ಮುಖ್ಯ ಆಗುತ್ತದೆ. ಯಾವುದೇ ಪ್ರಾಜೆಕ್ಟ್ ಆದರೂ ಕೆಲಸ ಮಾಡುವ ತಂಡ ಚೆನ್ನಾಗಿರಬೇಕು. ಕಥೆ ಚೆನ್ನಾಗಿದ್ದು, ನಿರ್ದೇಶಕರು ವಿಶ್ವಾಸ ಇಟ್ಟು ಪಾತ್ರ ಕೊಟ್ಟರೆ ಎಂತಹ ಪಾತ್ರವನ್ನಾದರೂ ಮಾಡಲು ಸಿದ್ಧ.

◆ ಕಿರುತೆರೆಯ ನಿಮ್ಮ ಅನುಭವವನ್ನು ಹೇಳುವುದಾದರೆ...

ಕಿರುತೆರೆ ಜೀವನವನ್ನು ಕೊಟ್ಟಿದೆ. ಬದುಕಿನ ಪಾಠವನ್ನು ಇಲ್ಲಿ ಕಲಿತಿದ್ದೇನೆ. ಮಾತನಾಡುವ ಕಲೆಯನ್ನು ಇದು ಹೇಳಿಕೊಟ್ಟಿದೆ. ಒಟ್ಟಾರೆ ಕ್ಯಾಮೆರಾ ಇಲ್ಲದೆ ನಾನಿಲ್ಲ ಎನ್ನುವಂತೆ ಆಗಿದೆ. ಬಣ್ಣ ಇಲ್ಲದಿದ್ದರೆ ಏನೋ ಕಳೆದುಕೊಂಡ ಅನುಭವ. ಇದೇ ಕಾರಣಕ್ಕೆ ಕಾರ್ಪೊರೇಟ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ದಿನಗಳಲ್ಲಿ ಕೊರಗಿದ್ದೇನೆ. ಅದನ್ನು ಬಿಟ್ಟು ಬಂದ ಮೇಲೆ ನನ್ನ ನೆಲದಲ್ಲಿ ನಿಂತಿದ್ದೇನೆ ಎನ್ನುವ ಸಮಾಧಾನವನ್ನು ಇದು ಕೊಟ್ಟಿದೆ. ಅಭಿಮಾನಿಗಳ ಪ್ರೀತಿ ನನಗೆ ಖುಷಿಯನ್ನು ಕೊಟ್ಟಿದೆ. ಯಾವುದೇ ಪಾತ್ರ ಮಾಡಿದರೂ ಜನರ ಪ್ರತಿಕ್ರಿಯೆಗೆ ಕಾಯುತ್ತಿರುತ್ತೇನೆ. ಅದು ತುಂಬ ಮುಖ್ಯ. ಕಷ್ಟದಿಂದ ಬಂದಿದ್ದೇನೆ. ನನ್ನದೇ ಆದ ಐಡೆಂಟಿಟಿ ಇಲ್ಲಿ ಇರಬೇಕು ಎಂದು ಬಯಸುತ್ತೇನೆ. ಸೀರಿಯಲ್ ಮಾಡುವುದು ನಮ್ಮ ಸಂಬಂಧಿಗಳಿಗೆ ಇಷ್ಟ ಇಲ್ಲ. ಓದಿರುವ ನಾನು ನೌಕರಿ ಮಾಡಬೇಕು ಎಂದು ಅವರು ಹೇಳುತ್ತಾರೆ. ಅವರಿಗಿಂತ ನನ್ನನ್ನು ಬೆಂಬಲಿಸಲು ವೀಕ್ಷಕರು ಇದ್ದಾರೆ. ಅವರ ಪ್ರೋತ್ಸಾಹವೇ ಬಂಧುತ್ವದ ಬೆಸುಗೆ ಎಂದುಕೊಂಡಿರುವೆ. ಅಪ್ಪ–ಅಮ್ಮ ಬೆನ್ನಿಗೆ ನಿಂತಿದ್ದಾರೆ, ಅವರ ಬಗ್ಗೆ ಹೆಮ್ಮೆ ಇದೆ. ವೀಕ್ಷಕರ ಪ್ರೀತಿ ಸಿಕ್ಕರೆ ಅದು ಪೋಷಕರಿಗೂ ಖುಷಿ ಕೊಡುತ್ತದೆ. ■